<u>**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**</u>

<u>**ಸಿ ಸಿ ನಂ. 15/2022**</u>

<u>**ಫಿರ್ಯಾದಿದಾರರು :-**</u> ನೆಲೋಗಿ ಪೊಲೀಸ್ ಠಾಣೆ

**: ವಿರುದ್ದ :**

<u>**ಆರೋಪಿತರು:**</u>

1. ಶಂಕರ ತಂದೆ ಈರಪ್ಪ ಮುರಡಿ
   ವಃ 22 ವರ್ಷ, ಉಃ ಚಾಲಕ
   ಸಾಃ ತಿಳಗೊಳ, ತಾಃ ಸಿಂಧಗಿ

<u>**ದೋಷಾರೋಪಣೆ**</u>

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

ಆರೋಪಿತರಾದ ನೀವು ದಿನಾಂಕ 17-05-2021 ರಂದು ಸಂಜೆ 05-00 ಗಂಟೆ ಸಮಯದಲ್ಲಿ ನೆಲೋಗಿ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಹುಲ್ಲೂರ ಗ್ರಾಮದ ಸೀಮಾಂತರದ ಭೀಮಾ ನದಿಯ ಮರಳು ದಕ್ಕಾದಿಂದ ಆರೋಪಿತನು ಟಿಪ್ಪರ ನಂ.ಕೆಎ-28/ಸಿ-6956 ನೆದ್ದರಲ್ಲಿ, ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ, ಕಳ್ಳತನ ಮಾಡುವ ಉದ್ದೇಶದಿಂದ ಸದರಿ ಟಿಪ್ಪರನಲ್ಲಿ ಸಾಗಾಣಿಕೆ ಮಾಡಲು ಮರಳನ್ನು ಕಳ್ಳತನದಿಂದ ತುಂಬಿರುತ್ತಿರಿ, ಆದ್ದರಿಂದ ನೀವು ಭಾ. ದಂ. ಸಂ. ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ 13-03-2026

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**<u>ಆರೋಪಿಗಳ ಹೇಳಿಕೆ</u>**

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ: ಆ-

ಪ್ರಶ್ನೆ -2: ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ: ಆ-

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ 13-03-2026

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.